


ಅವತ್ತು ಬೆಳಗ್ಗೆಯಿಂದಲೆ ಬಸಾಪುರದಲ್ಲಿ ಎಲ್ಲಿಲ್ಲದ ಸಂಭ್ರಮ ಸಡಗರ ಹರಡಿಕೊಂಡಿತ್ತು. ಜನ ಕೆಲಸಬಲಸ ಬಿಟ್ಟು ಹಳ್ಳಿಯ ಕುಲುಮೆ ಹತ್ತಿರ ಸೇರಿದ್ದರು. ಅವತ್ತು ಅಲ್ಲಿ ಸಿನಿಮಾ ಶೂಟಿಂಗ್ ನಡೆದಿತ್ತು. ಸುಪ್ರಸಿದ್ಧ ಸ್ಟಾರ್ ಮದನ್ ರಾಜ್ ಅವರು ಇನ್ನೇನು ಬರುವವರಿದ್ದರು. ಅವರು ಕುಲುಮೆ ಕರೀಮ್ ಸಾಬನ ಪಾತ್ರವನ್ನು ಮಾಡುವವರಿದ್ದರು. ಚೈಲ್ಡ್ ಸ್ಟಾರ್ ನಿತಿನ್ ಅವರ ಮಗನಾಗಿ ಪಾತ್ರ ಮಾಡುವನಿದ್ದ. ಕುಲುಮೆ ಜಲೀಲ್ ಸಾಬ್‌ನಿಗೆ ಸೇರಿದ್ದು. ಇವತ್ತು ಸಿನಿಮಾದವರಿಗಾಗಿ ಆತ ತನ್ನ ಕುಲುಮೆಯನ್ನು ಹೊತ್ತಿಸಿ, ನಾಲ್ಕಾರು ಕುಡುಗೋಲು, ಕೊಡಲಿಗಳನ್ನು, ಚಿಪ್ಪಟಿಗೆ, ಸುತ್ತಿಗೆ, ನೀರಿನ ಪಾತ್ರೆ ಇತ್ಯಾದಿ ಸಾಧನಗಳನ್ನು ಜೋಡಿಸಿಡುತ್ತಿದ್ದ, ಇದನ್ನು ನೋಡಲು ಜನ ಜಾತ್ರೆ ಸೇರಿದ್ದರು. ಕುಲುಮೆಯ ತಿದಿಯನ್ನು ಎಳೆಯುವುದು ಹೇಗೆ, ಬೆಂಕಿಯಿಂದ ಕಾದ ಕುಡುಗೋಲನ್ನು ಹೇಗೆ ತೆಗೆಯುವುದು, ಮಗನ